


**ರಾಮಮನೋಹರ ಲೋಹಿಯಾ ಜೀವನಯಾನ**

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ಲೋಹಿಯಾ v/s ನೆಹರು

## ದುಗುಡದ ನಡುವೆ ಚುನಾವಣೆಯ ಚೈತನ್ಯ!

ಇಸವಿ 1962. ಮೂರನೇ ಲೋಕಸಭಾ ಚುನಾವಣೆಯ ಕಲರವ ಶುರುವಾಗಿತ್ತು. ಮಧ್ಯಪ್ರದೇಶದ ಗ್ವಾಲಿಯರ್ ಲೋಕಸಭಾ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷ ಪೌರ ಕಾರ್ಮಿಕ ಮಹಿಳೆ ಸುಖೋರಾಣಿಯವರನ್ನು ಮಹಾರಾಣಿ ವಿಜಯರಾಜೇ ಸಿಂಧ್ಯಾ ಎದುರು ಚುನಾವಣೆಗೆ ನಿಲ್ಲಿಸಿತು. ಉತ್ತರಪ್ರದೇಶದ ಫೂಲ್‌ಪುರ ಕ್ಷೇತ್ರದಲ್ಲಿ ಪ್ರಧಾನ ಮಂತ್ರಿ ನೆಹರು ವಿರುದ್ಧ ಲೋಹಿಯಾ ಚುನಾವಣೆಗೆ ನಿಂತರು.

ಕಳೆದ ಒಂದೆರಡು ವರ್ಷಗಳಲ್ಲಿ ಲೋಹಿಯಾರನ್ನು ಮುತ್ತುತ್ತಿದ್ದ ನಿರಾಶೆ, ಆತಂಕಗಳನ್ನು ಚುನಾವಣೆಯ ಸಿದ್ಧತೆ ಕೊಂಚ ಹಿಮ್ಮೆಟ್ಟಿಸತೊಡಗಿತು. ಆವರೆಗೆ ನಿತ್ಯದ ರಾಜಕೀಯ ಸಂಘಟನೆಯ ಬದ್ಧತೆ, ಚಿಂತನೆ, ಉತ್ಸಾಹಗಳ ನಡುನಡುವೆಯೂ ಲೋಹಿಯಾರನ್ನು ಬಗೆಬಗೆಯ ದುಗುಡ ಮುತ್ತುತ್ತಿತ್ತು. ಈ ದುಗುಡ ಲೋಹಿಯಾ ತಮಗೆ ತಾವೇ ಉಸುರಿಕೊಳ್ಳುವಂತೆ ರಮಾಗೆ ಬರೆದ ಪತ್ರಗಳಲ್ಲಿ ಅಷ್ಟಿಷ್ಟು ವ್ಯಕ್ತವಾಗುತ್ತಿತ್ತು:

'ನಾನು ರಾಜಕಾರಣಿಯಾಗಲೀ, ಲೇಖಕನಾಗಲೀ ಆಗಲು ಹುಟ್ಟಿದವನಲ್ಲ ಎಂದು ಅನೇಕ ಸಲ ಅನ್ನಿಸಿದೆ. ಅದಕ್ಕೇ ನಾನು ಎರಡರಲ್ಲಿಯೂ ಸಮರ್ಥನಾಗಲಿಲ್ಲ. ನಮ್ಮ ವ್ಯಾಪಾರಿ ಮನೆತನದ ಮುಂದುವರಿಕೆಯಂತೆ ನಾನು ಕೂಡ ಶುದ್ಧ ಸುಖಭೋಗಿಯಾಗಬೇಕಿತ್ತೇನೋ. ಆದರೆ ಮನೆಯವರು ನನಗಾಗಿ ಹಣಕಾಸೇನನ್ನೂ ಬಿಟ್ಟು ಹೋಗಲಿಲ್ಲ!'

ಜನರ ಬೂಟಾಟಿಕೆ, ತಮ್ಮ ಪಕ್ಷದ ಜನರ ಕಪಟ ಕಂಡು ಲೋಹಿಯಾಗೆ ಬೇಸರವಾಗುತ್ತಿತ್ತು. ಚುನಾವಣೆಯ ನಿರ್ಣಾಯಕ ಸಂದರ್ಭಗಳಲ್ಲಿ ಕೂಡ ಜನ ಎಚ್ಚರಗೊಳ್ಳದಿರುವುದು ಹತಾಶೆ

